# ಬದುಕಿನಲ್ಲಿ ಸೃಜನಶೀಲತೆ

ವಿಜಯಕುಮಾರ

**ಬುದ್ಧಿಶಕ್ತಿಗೆ,** ವಿವೇಚನಾಶಕ್ತಿಗೆ ಮತ್ತೊಂದು ಹೆಸರಾದ ಆಂಜನೇಯನ ಸಂಬಂಧವಾಗಿ ನಮ್ಮ ಪುರಾಣಗಳಲ್ಲಿ ಒಂದು ಪ್ರಸಂಗ ಇದೆ. ಆತ ಹುಟ್ಟಿದ ಸ್ವಲ್ಪ ಹೊತ್ತಿನಲ್ಲೇ ಆತನಿಗೆ ಹಸಿವಾಯಿತು. ತಲೆಯೆತ್ತಿ ನೋಡಿದಾಗ ಪೂರ್ವದಿಕ್ಕಿನಲ್ಲಿ ಕೆಂಪಗೆ ಕಾಣುತ್ತಿದ್ದ ವಸ್ತುವೊಂದು ಕಾಣಿಸಿತು. ಕೆಂಪಗಿದ್ದ ಸೂರ್ಯನನ್ನು ಹಣ್ಣೆಂದು ಭಾವಿಸಿ ಅದನ್ನು ಹಿಡಿಯಲೆಂದು ವಾಯುಪುತ್ರನಾದ ಆಂಜನೇಯ ಹಾರಿಯೇಬಿಟ್ಟ. ಹುಡುಗಾಟ ಪ್ರಮಾದವೇ ಆಯಿತು. ಸೂರ್ಯನ ಶಾಖದಿಂದ ಮುಖಸುಟ್ಟರೂ ಹಟಬಿಡದೆ ಹಾರುತ್ತಿದ್ದ ಹನುಮಂತ. ಸೂರ್ಯನನ್ನು ಹಿಡಿದೇಬಿಡಬಹುದೆಂಬ ಹೆದರಿಕೆ ದೇವೇಂದ್ರನಿಗುಂಟಾಯಿತು. ತನ್ನ ವಜ್ರಾಯುಧದಿಂದ ಆಂಜನೇಯನಿಗೆ ಹೊಡೆದ. ಆ ಹೊಡೆತದಿಂದ ಕೆಳಗೆ ಬಿದ್ದ ಆಂಜನೇಯನ ಕೆನ್ನೆ ಊದಿಕೊಂಡಿತು. ಈ ಪುರಾಣಕಥೆಯ ಸಾಂಕೇತಿಕತೆ ಅದ್ಭುತವಾದದ್ದು. ಅಸಾಧಾರಣವಾದ ಬುದ್ಧಿಶಕ್ತಿ, ವಿವೇಚನಾಶಕ್ತಿಯುಳ್ಳ ಚೇತನಗಳ ದೃಷ್ಟಿ ಮತ್ತು ಪ್ರಶ್ನೆಗಳು ಹುಟ್ಟಿನಿಂದಲೇ ಊರ್ಧ್ವಮುಖವಾಗಿರುತ್ತವೆ ; ಸೀಮಾರೇಖೆಗಳನ್ನರಿಯದ ಶೋಧ ಅವರದು ; ತಮ್ಮ ಶೋಧನೆಯೆಂಬ ತಪಸ್ಸಿನಲ್ಲಿ ಸುಟ್ಟುಹೋದರೂ ಸರಿಯೇ ತಾವು ಹಿಡಿದಿದ್ದನ್ನು ಸಾಧಿಸದೇ ಬಿಡದ ಛಲವುಳ್ಳ ಗಟ್ಟಿಪಿಂಡಗಳು ಅವು—ಎಂಬುದರ ಸಾಂಕೇತಿಕ ಧ್ವನಿಯನ್ನು ಈ ಪುರಾಣಕಥೆಯಲ್ಲಿ ಗುರುತಿಸಬಹುದು. ಬದುಕಿನಲ್ಲಿ ಅಡಕವಾಗಿರುವ ಅನಂತ ಸಾಧ್ಯತೆಗಳನ್ನು ಗುರುತಿಸಿ, ಬದುಕಿಗಿರುವ ಹೊಸ ಹೊಸ ಆಯಾಮಗಳನ್ನು ಶೋಧಿಸುವುದರಲ್ಲೇ ಜೀವನದ ಸಾರ್ಥಕತೆಯ ರಹಸ್ಯ ಅಡಗಿದೆ.

ಬದುಕು ಒಂದು ಅನ್ವೇಷಣೆಯ ಪರಂಪರೆ. ಹುಡುಕುವುದು ಅದರ ನಿತ್ಯ ವಿಧಿ. ನೆಲದಲ್ಲಿ ಹರಿಯುವ ಹುಳು, ಆಕಾಶದಲ್ಲಿ ಹಾರುವ ಹಕ್ಕಿ, ಓಡಾಡುವ ಮೃಗ, ಆಟವಾಡುವ ಮಗು, ಹೆಂಗಸರು ಗಂಡಸರು ಹುಡುಗರು ಮುದುಕರು—ಎಲ್ಲರೂ ತಮ್ಮ ಸ್ವಭಾವಕ್ಕನುಸಾರವಾಗಿ ಅವಸ್ಥಾಭೇದಗಳಿಗೆ ತಕ್ಕಂತೆ ಏನನ್ನಾದರೂ ಹುಡುಕುತ್ತಲೇ ಇರುತ್ತಾರೆ. ಈ ಹುಡುಕಾಟದಿಂದಲೇ ಮಗುವಿನ ಅನುಭವ ಪ್ರಪಂಚ ವಿಸ್ತಾರವಾಗುತ್ತಾ ಹೋಗುವುದು. ಈ ಅನುಭವ ಪ್ರಪಂಚದ ವಿಸ್ತರಣೆ ಅದರ ಬೆಳವಣಿಗೆಯ ಮುಖ್ಯವಾದ ಆಯಾಮ. ಮೆಲ್ಲ ಮೆಲ್ಲನೆ ಹೊಸ ಹೊಸ ಅಭಿರುಚಿಗಳು ಹುಟ್ಟಿದಂತೆ ಅದರ ಅನುಭವದ ಕ್ಷಿತಿಜವೂ ವಿಶಾಲವಾಗುತ್ತದೆ. ಈ ಅನುಭವದ ಕ್ಷಿತಿಜವನ್ನು ವಿಸ್ತರಿಸುವ ಅಭಿರುಚಿಗಳ ಮೂಲದಲ್ಲಿರುವುದು ಕುತೂಹಲ, ಕೌತುಕತೆ. ಪಾಶ್ಚಾತ್ಯ ಚಿಂತಕ ಕಾಂಪ್ಟನ್ ಮೆಕೆನ್ಸಿ (*Compton Mackenzie*) ಎಂಬಾತ ಹೇಳುವಂತೆ "ಜೀವನದಲ್ಲಿ ಸುಖಾನುಭೂತಿಯನ್ನು ಖಂಡಿತ ದೊರಕಿಸಿಕೊಡುವ ಒಂದು ಮುಖ್ಯವಾದ ಸಾಧನವೆಂದರೆ ಕುತೂಹಲ, ಕೌತುಕತೆ ಅಥವಾ ಆಶ್ಚರ್ಯ ಭಾವ—*sense of wonder*. ನಮಗೆ ವಯಸ್ಸಾದಂತೆ ನಮ್ಮ ಕುತೂಹಲವನ್ನು ಸಜೀವವಾಗಿಟ್ಟುಕೊಳ್ಳುವ ಆವಶ್ಯಕತೆಯೂ ಹೆಚ್ಚಾಗುತ್ತದೆ. ಮಧ್ಯ ವಯಸ್ಸು ನಿಜವಾಗಿ ಪ್ರಾರಂಭವಾಗುವುದು ಕುತೂಹಲದ ಇಳಿತದೊಡನೆ. ಕುತೂಹಲದ ಕೊರತೆಯ ಮೊದಲ ಮೊಳಕೆ ಗಮನಕ್ಕೆ ಬಂದೊಡನೆಯೇ ನಾವು ಅದನ್ನು ನಿರ್ದಯವಾಗಿ ಮೆಟ್ಟಿಹಾಕಬೇಕು."

ನಿರಂತರ ಚಲನಶೀಲವಾದ ಮತ್ತು ಬದಲಾವಣೆಗಳಾಗುತ್ತಿರುವ ಬದುಕಿನಲ್ಲಿ ಈ ಕುತೂಹಲ ಬಹಳ ಮುಖ್ಯವಾದ ಪಾತ್ರವನ್ನು ವಹಿಸುವುದು. ಬದುಕಿನ ಈ ಬದಲಾವಣೆಗಳನ್ನು ಅರಿಯುವುದರಲ್ಲಿಯೇ ಜೀವನದ ಸೊಗಸು ಇರುವುದು. ನಮ್ಮ ಅನುಭವದ ವ್ಯಾಪ್ತಿಯಲ್ಲಿ ಬರುವ ಈ ಬದಲಾವಣೆಗಳನ್ನು ಸಾಕ್ಷೀಭೂತವಾಗಿ ನೋಡಿದಾಗ ಜೀವನದ ಅರ್ಥ ಹೊಳೆಯುತ್ತದೆ. ಜೀವನದಲ್ಲಿನ ಅರ್ಥ, ಒಳನೋಟಗಳನ್ನು ಪಡೆಯುವ ಆ ಕ್ಷಣಗಳನ್ನು ಸೃಜನಾತ್ಮಕ ಕ್ಷಣಗಳು, ಇಂಗ್ಲಿಷಿನಲ್ಲಿ *creative moments* ಎನ್ನುತ್ತಾರೆ. ಈ ಸೃಜನಾತ್ಮಕ ಕ್ಷಣಗಳಲ್ಲಿ ತೋರಿಕೆಗೆ ಒಂದಕ್ಕೊಂದು ಸಂಬಂಧವಿಲ್ಲದಂತೆ ಕಾಣುವ ಅನುಭವಗಳೆಲ್ಲದರ ಹಿಂದಿನ ಅರ್ಥ ನಮಗೆ ಹೊಳೆಯುತ್ತದೆ.

ಶ್ರೀರಾಮಕೃಷ್ಣರು ಒಂದು ಸ್ವಾರಸ್ಯಕರವಾದ ಮಾತನ್ನು ಹೇಳುತ್ತಾರೆ—ಒಂದೇ ರೀತಿಯ ಆಹಾರ ತೆಗೆದುಕೊಳ್ಳುವ ಹಸುವಿಗಿಂತಲೂ ತನಗೆ ಸಿಕ್ಕದ್ದನ್ನೆಲ್ಲಾ ತಿನ್ನುವ ಹಸು ಹೆಚ್ಚಾಗಿ ಹಾಲನ್ನು ಕೊಡುತ್ತದೆ ಎಂದು. ಕಾಳು, ಕಡ್ಡಿ, ಕಸ ಏನನ್ನೇ ತಿನ್ನಲಿ, ಅದು ಕೊಡುವುದು ಹಾಲನ್ನೇ. ನಮಗೆ ದೊರಕುವ ವೈವಿಧ್ಯಮಯವಾದ ಅನುಭವಗಳಿಗೂ ಇದು ಅನ್ವಯಿಸುತ್ತದೆ. ಹಸು ತಾನು ತಿಂದದ್ದನ್ನೆಲ್ಲಾ ಒಂದು ಕಡೆ ಕುಳಿತು ಅಗಿಯುವಂತೆ ಗತ ಮತ್ತು ವರ್ತಮಾನದ ಅನುಭವಗಳನ್ನು ಮೆಲಕು ಹಾಕುತ್ತಾ ಅರಗಿಸಿಕೊಳ್ಳುವುದರಿಂದ, ಸೃಜನಾತ್ಮಕವಾಗಿ ಅವುಗಳನ್ನು ಅಭಿವ್ಯಕ್ತಿಸಲು ಸಾಧ್ಯ. ಸೃಜನಾತ್ಮಕ ಬದುಕಿನಲ್ಲಿ ಏಕತಾನತೆ(*monotony*) ಇರುವುದಿಲ್ಲ. ಹೊಸ ಸಾಧ್ಯತೆಗಳಿಗೆ ಆಕಾಂಕ್ಷೆಗಳಿಗೆ ತೆರೆದ ಮನವಿರುತ್ತದೆ. ಅಥರ್ವವೇದದಲ್ಲಿ ಒಂದು ಮಾತು ಬರುತ್ತದೆ— "ಮನುಷ್ಯನಲ್ಲಿ ಹೊಸಹೊಸತನ್ನು ರಚಿಸುವ ಶಕ್ತಿ ಇದೆ, ಮುಂದೆ ಮುಂದೆ ಹೋಗುವ ಶಕ್ತಿ ಇದೆ, ಯಾವುದರಲ್ಲಿಯೂ ಅವನು ಕೀಳರಿಮೆಯನ್ನು ಬೆಳೆಸಿಕೊಳ್ಳಬಾರದು, ಆತ ಸದಾ ಮುನ್ನುಗ್ಗುತ್ತಲೇ ಇರಬೇಕು—ಚರೈವೇತಿ ಚರೈವೇತಿ—ಎಂದು ಆ ವೇದ ಹೇಳುತ್ತದೆ. ಮನುಷ್ಯನ ಪ್ರತಿಭೆ ನವನವೋನ್ಮೇಷಶಾಲಿಯಾದುದು ಎಂಬ ನಮ್ಮ ಆಲಂಕಾರಿಕರ ಮಾತೂ ಈ ಅಭಿಪ್ರಾಯವನ್ನೇ ಸಮರ್ಥಿಸುತ್ತದೆ.

ಒಮ್ಮೆ ಕೆಲವು ಶಿಷ್ಯರು ಬುದ್ಧನ ಮುಂದೆ ಒಂದು ಸಂದೇಹ ವ್ಯಕ್ತಪಡಿಸಿದರು. ದಿನವಿಡೀ ನಾನಾಬಗೆಯ ಪಾಠಪ್ರವಚನಗಳಲ್ಲಿ ನಾನಾವಿಧದ ಅಭಿಪ್ರಾಯ ಮಂಡನೆಯಾಗುತ್ತದೆ. ಯಾವುದನ್ನು ಸ್ವೀಕರಿಸಬೇಕು, ಯಾವುದು ಅನಗತ್ಯ ಎಂದು ತಿಳಿಯುವ ಬಗೆ ಹೇಗೆ? ಬುದ್ಧ ಹೇಳಿದ—"ಹಿಂದೆ, ಇಂದು ಹಾಗೂ ಮುಂದೆ ನೀವು ಓದುವ ಕೇಳುವ ಎಲ್ಲಾ ವಿಚಾರ, ಅಭಿಪ್ರಾಯಗಳೂ ಸತ್ಯಸಾಕಾರದ ಪಥದಲ್ಲಿ ವ್ಯಾಖ್ಯಾನಗಳು ಮಾತ್ರ. ಸತ್ಯದ ಧ್ವನಿ ನಿಮ್ಮೊಳಗಿಂದ ನಿಮ್ಮನ್ನು ಸದಾ ಎಚ್ಚರಿಸುತ್ತಿರುತ್ತದೆ. ಅದೇ ನಿಮ್ಮ ಮಾರ್ಗದರ್ಶಕ. ಗಮನ ವಿಟ್ಟು ಆಲಿಸಿ ಅರ್ಥಮಾಡಿಕೊಂಡವನಿಗೆ ಗುರಿ ಸೇರಲು ತಡವಾಗದು."

ಈ ಸತ್ಯದ ದನಿ ಸಾರ್ವತ್ರಿಕವಾದುದು, ಜಗತ್ತಿನ ಯಾವ ಭಾಗದವರಾದರೂ ಅನುಸರಿಸಬಹುದಾದದ್ದು. ಈ ಸತ್ಯದ ದನಿಯನ್ನು ಕೇಳಲು, ಅದರ ಸ್ವರೂಪವನ್ನು ಅರಿಯಲು ಅನಾದಿ ಕಾಲದಿಂದಲೂ ಬಂದು ಹೋಗಿರುವ ಉದಾತ್ತ ಚೇತನಗಳು ತಮ್ಮ ಬದುಕನ್ನೇ ಸಮರ್ಪಿಸಿಕೊಂಡಿರುವರು. ಅಷ್ಟೇ ಅಲ್ಲ, ತಾವು ಕಂಡುಕೊಂಡ ಸತ್ಯವನ್ನು ಎಲ್ಲರೂ ಕಾಣಲಿ ಎಂಬ ಆಸೆಯಿಂದ ತಮ್ಮ ಚಿಂತನೆಗಳಲ್ಲಿ ಅವರು ಕಂಡದ್ದನ್ನು ಬಿಟ್ಟುಹೋಗಿದ್ದಾರೆ. ಅವರ ಬದುಕಿನ ಪ್ರತಿಯೊಂದು ಕ್ಷಣವೂ ಸತ್ಯದ ಹೊಳಹನ್ನು ಪಡೆದ ಸೃಜನಾತ್ಮಕ ಕ್ಷಣಗಳೇ ಆಗಿರುತ್ತವೆ. ಅವರ ನುಡಿಗಳಲ್ಲಿ ವ್ಯಕ್ತಿಯ ಅಂತರಂಗದ ಬೆಳವಣಿಗೆಯ ಕುರಿತು ಚಿಂತನೆ ಇದೆ, ನೈತಿಕ ಮತ್ತು ಆಧ್ಯಾತ್ಮಿಕ ಉನ್ನತಿಗಾಗಿ ಬೇಕಾದ ಸ್ಫೂರ್ತಿ ಇದೆ. ಅವರು ಶಾಶ್ವತವಾದ ಮಾನವೀಯ ಮೌಲ್ಯಗಳನ್ನು ಬೋಧಿಸಿರುವರು. ಇತರರೂ ಸಚ್ಚಾರಿತ್ರ್ಯದಿಂದ, ಶುದ್ಧಾತ್ಮರಾಗಿ, ನೀತಿವಂತರಾಗಿ ಬದುಕಿನಲ್ಲಿ ಪರಿಪೂರ್ಣತೆಯನ್ನು ಪಡೆಯಲಿ ಎಂಬ ಆಶಯ ಅವರದು. ವ್ಯಾಸ, ವಾಲ್ಮೀಕಿಗಳೇ ಆದಿಯಾಗಿರುವ ಇವರೆಲ್ಲರ ರಚನೆಗಳ ಅಂತರಾಳದಲ್ಲಿ ಮಿಡಿಯುತ್ತಿರುವ ಒಳದನಿ ಇದೇ ಆಗಿದೆ. ಲೋಕೋಪಕಾರಕ್ಕಾಗಿ ಬಿಟ್ಟುಹೋಗಿರುವ ಇವರ ತಪೋಮಯವಾದ ಬದುಕಿನ ಹಾಗೂ ಕೃತಿಗಳ ಋಣವನ್ನು ನಂತರದ ಪೀಳಿಗೆಯವರು ಪ್ರಾಯಶಃ ತೀರಿಸಲಾರದಂಥ ಅಪೂರ್ವವಾದ ಕೊಡುಗೆ ಅವರದು.

ಅಧ್ಯಾತ್ಮದ ಅನುಭಾವಿಗಳನ್ನು ಬಿಟ್ಟರೆ ಸತ್ಯದ ಹೊಳಹನ್ನು ಕಂಡಿರುವವರೆಂದರೆ ಅಪ್ರತಿಮ ಕಲಾಕಾರರು, ಮಹಾನ್ ದಾರ್ಶನಿಕರು ಹಾಗೂ ವಿಜ್ಞಾನಿಗಳು. ಇವರದೂ ಸಹ ಯಾವ ತಪಸ್ವಿಗಿಂತಲೂ ಕಡಿಮೆಯಲ್ಲದ ಉತ್ಕಟವಾದ ತೀವ್ರವಾದ ಬದುಕು. ಕಲೆ, ವಿಜ್ಞಾನ, ಹಾಗೂ ಸಾರಸ್ವತ ಪ್ರಪಂಚಕ್ಕೇ ಮುಡಿಪಾಗಿಟ್ಟ ಅವರ ಬದುಕು ಜನಸಾಮಾನ್ಯರ ಕಲ್ಪನೆಗೂ ಎಟುಕದಂತಿರುವುದು. ಸಾಮಾನ್ಯ ಮಾನವನ ಹೃದಯಾಂತರಾಳದಲ್ಲಿ ಅಡಗಿರುವ ಕ್ಷುಲ್ಲಕ ಮತ್ತು ಕುತ್ಸಿತ ವಿಕಾರಗಳನ್ನು ಮೆಟ್ಟಿ ಮೇಲೇರಿ ಊರ್ಧ್ವಗಾಮಿಯಾಗಿ ಹಾರಲು ಹಾತೊರೆಯುವ ಮಹಾಚೇತನಗಳು ಇವರು. ಮನುಷ್ಯನ ತಿಳಿವಳಿಕೆ ಹೆಚ್ಚಿದಂತೆ ಹೋರಾಟವೂ ತೀವ್ರವಾಗುತ್ತದೆ ಎಂಬುದಕ್ಕೆ ಜೀವಂತ ನಿದರ್ಶನ ಇವರ ಬದುಕು. ಈ ಜಗತ್ತಿಗೆ ತಮ್ಮ ಅಲ್ಪಾವಧಿ ಬದುಕಿನಲ್ಲಿ ಈ ಪ್ರತಿಭಾಸಂಪನ್ನರು ಸಲ್ಲಿಸಿರುವ ಸೃಜನಶೀಲ ಕಾಣಿಕೆ ಅಮೋಘವಾದದ್ದು. ಅವರ ಬದುಕು ಸುಖ ಸಂತೋಷಗಳ ಬೀಡಾಗಿರುವುದಿಲ್ಲ. ಒಮ್ಮೆ ಇಳಿವಯಸ್ಸಿನಲ್ಲಿದ್ದ ಚಿತ್ರಕಾರ ಪಿಕಾಸೋ (*Picasso*)ನ ಆರೋಗ್ಯ ಕೆಟ್ಟಿತು. ಡಾಕ್ಟರರು ಅವನಿಗೆ ಮೊದಲಿಗಿಂತ ಅರ್ಧ ಹೊತ್ತು ಕೆಲಸ ಮಾಡಬೇಕೆಂದು ವಿಧಿಸಿದರು. ಆದರೆ ಆತ ಮೊದಲಿಗಿಂತಲೂ ಹೆಚ್ಚು ಹೊತ್ತು ಚಿತ್ರ ಬರೆಯುವುದರಲ್ಲಿ ತೊಡಗಿದ್ದ. ಅದಾವುದೋ ದೈತ್ಯಶಕ್ತಿ ಅವನನ್ನು ಆ ವಯಸ್ಸಿನಲ್ಲಿಯೂ ದುಡಿಮೆಗೆ ಹಚ್ಚಿತು.ಆತ ಹೇಳುತ್ತಿದ್ದ "ನಾನು ಸಾವಿಗೆ ಹೆದರುವವನಲ್ಲ. ಆದರೆ ಕಾಲ ನೋಡಿ, ಓಡುತ್ತಿದೆ. ದುಃಖದ ಸಂಗತಿಯೆಂದರೆ ಹೋದಕಾಲ ಹೋಗಿಯೇ ಬಿಡುತ್ತದೆ." ತಾನು ಕಾಲವಾಗುವ ಮುನ್ನ ತನ್ನ ಕಲಾಮುಖದಿಂದ ಹೇಳಬೇಕಾದ್ದನ್ನೆಲ್ಲ ಹೇಳಿ ಮುಗಿಸಬೇಕೆಂಬ ಆತುರ ಅವನದು. ಆದರೆ ಅವನ ಕಲಾರಚನೆಯ ವಿಪುಲತೆ ನೋಡಿದಾಗ ಅದು ಮುಗಿಯದಷ್ಟು ಅಕ್ಷಯವೂ ಆಗಿರುವಂತೆ ಕಾಣುತ್ತದೆ. "ಕೆಲಸ ಮಾಡದಿದ್ದರೆ ನಾನು ಸತ್ತಂತೆಯೇ. ನನ್ನ ಚಿತ್ರಗಳು ನನ್ನ ಹೃದಯದ ನೆತ್ತರಿನಿಂದ ಮೂಡಿಬಂದವು. ದುಡಿಯುವುದರಿಂದ ಮಾತ್ರ ನನಗೆ ಸುಖ" ಎಂದಾತ ಹೇಳುತ್ತಿದ್ದ.

ಟಿ.ಎಸ್.ಎಲಿಯಟ್ (*T.S. Eliot*) ಆಗಲಿ, ವರ್ಜೀನಿಯಾ ವುಲ್ಫ್ (*Virginia Wolf*),ಆಗಲಿ ಅಥವಾ ಪಾಬ್ಲೋ ಪಿಕಾಸೋ (*Pablo Picasso*),ಆಗಲಿ—ತಮ್ಮ ಕಲಾಸಕ್ತಿಯನ್ನು ಎಂತಹ ಪರಿಸ್ಥಿತಿಯಲ್ಲೂ ಪೋಷಿಸಿಕೊಂಡು ಬರಲು ಅವರು ಅನುಭವಿಸುವ ಮಾನಸಿಕ ಹಿಂಸೆ, ತೊಳಲಾಟಗಳೇನೂ ಕಡಿಮೆಯಲ್ಲ. ಹಿಂದೀ ಸಾಹಿತ್ಯ ಕ್ಷೇತ್ರದಲ್ಲಿ ಭಕ್ತಿಕಾವ್ಯದ ರಸವನ್ನು ತನ್ನ ಗೀತೆಗಳಲ್ಲಿ ತುಂಬಿಸಿದ ವರಕವಿ ಸೂರದಾಸ ಹುಟ್ಟು ಕುರುಡನಾದರೆ, ಪ್ಯಾರಡೈಸ್ ಲಾಸ್ಟ್ ಬರೆದ ಮಿಲ್ಟನ್ ದೃಷ್ಟಿಹೀನ. ಪಾಶ್ಚಾತ್ಯ ಸಂಗೀತವನ್ನು ಶ್ರೀಮಂತಗೊಳಿಸಿದ ಬೀಥೋವನ್ ಕಿವುಡನಾಗಿದ್ದ. ಹೀಗೆ ಶರೀರದಲ್ಲಿ ಅಶಕ್ತರಾದರೂ ಎಂತಹ ಪರಿಸ್ಥಿತಿಯಲ್ಲೂ ಧೃತಿಗೆಡರು ಇವರು.

ಸಾರಸ್ವತ ಪ್ರಪಂಚಕ್ಕೆ ಅಪ್ರತಿಮ ಕೃತಿಗಳನ್ನು ಬಿಟ್ಟುಹೋಗಿರುವ ಮಹಾಚೇತನಗಳು ತಮ್ಮ ಜೀವನದ ಹೋರಾಟಗಳನ್ನು, ಗಾಢವಾದ ಚಿಂತನೆಗಳನ್ನು ಮತ್ತು ಅನರ್ಘ್ಯವಾದ ತಮ್ಮ ಜೀವಸಾರವನ್ನೇ ಅವುಗಳಲ್ಲಿ ಭಟ್ಟಿ ಇಳಿಸಿರುತ್ತಾರೆ. ಅವರ ಬೌದ್ಧಿಕ ಹಾಗೂ ಭಾವನಾ ಪ್ರಪಂಚದ ದಿಗಂತ ಅಚ್ಚರಿ ಎನಿಸುವಷ್ಟು ವಿಶಾಲವಾಗಿರುತ್ತದೆ. ಮಾನವನ ಹೃದಯದಲ್ಲಿ ಉದ್ಭವಿಸುವ ನಾನಾಬಗೆಯ ರಾಗ-ವಿರಾಗಗಳು, ತೆರ ತೆರನ ಭಾವನೆಗಳು, ಮನುಷ್ಯನ ಅಂತರಾಳದಲ್ಲಿ ಹೆಪ್ಪುಗಟ್ಟಿದ ನೋವುಗಳನ್ನು ಸಂಗೀತದಲ್ಲಿ ಪ್ರಕಾಶಿಸುವುದಾಗಲಿ, ಮನಮುಟ್ಟುವ ಭಾಷೆಯಲ್ಲಿ ಅಭಿವ್ಯಕ್ತಿಸುವುದಾಗಲಿ, ಅಥವಾ ಕುಂಚದಲ್ಲಿ ಮೂಡಿಸುವುದಾಗಲಿ ಕಲಾತಪಸ್ವಿಗಳಿಗೆ ಮಾತ್ರ ಸಾಧ್ಯ. ದೌರ್ಬಲ್ಯ, ಸಾಮರ್ಥ್ಯ, ಸಂದೇಹ, ಸಮಾಧಾನ ಮೊದಲಾದ ಭಾವತರಂಗಗಳೇ ಮೊದಲಾಗಿ ಮಾನವ ಹೃದಯದಲ್ಲೇಳುವ ಕಹಿನೋವಿನ ಸಂಕಟಗಳು, ಸ್ಫೋಟಗೊಳ್ಳುವ ಜ್ವಾಲಾಮುಖಿಗಳು ಒಂದು ಕಡೆಯಾದರೆ ಇದಕ್ಕೆ ವ್ಯತಿರಿಕ್ತವಾಗಿ ಅವನ ಬದುಕಿನಲ್ಲಿನ ಸಂತಸದ, ಆನಂದದ ಕ್ಷಣಗಳು, ನಿರೀಕ್ಷೆಗಳು ನಿಜವಾದಾಗ ಉಂಟಾಗುವ ಸಂಭ್ರಮ—ಇವೇ ಮುಂತಾದ ಭಾವಗಳು

ಅಭಿವ್ಯಕ್ತಿ ಪಡೆಯುವುದನ್ನು ಅನೇಕ ಸೃಜನಾತ್ಮಕ ಚಿಂತಕರಲ್ಲಿ ನಾವು ನೋಡಬಹುದು. ಮನಸ್ಸನ್ನು ಅರಳಿಸಿ, ಬುದ್ಧಿಯನ್ನು ಬೆಳಗಿಸಿ, ಹೃದಯವನ್ನು ಹಿಗ್ಗಿಸಿ ಆ ಮೂಲಕ ಮಾನವ ಸ್ವಭಾವದ ಮನವರಿಕೆಯನ್ನು ಮಾಡಿಕೊಡುವ ಒಂದು ಶಕ್ತಿ ಅವರ ಕೃತಿಗಳಿಗಿರುತ್ತದೆ.

ಅನೇಕ ವೇಳೆ ಅವರದು ಏಕಾಕಿ ಜೀವನವೂ ಹೌದು. ಏಕಾಂತವಾಸ ಮತ್ತು ತುಂಬಾ ಕಠಿಣವಾದ ಜೀವನವನ್ನು ಅಪ್ಪಿಕೊಂಡ ಕೀರ್ಕೆಗಾಡ್ (*Kierkegaard*), ವ್ಯಕ್ತಿ ತನ್ನನ್ನು ತಾನೇ ಗುರುತಿಸಿಕೊಳ್ಳಲು ಏಕಾಂತವಾಸದಲ್ಲಿ ಅಂತರ್ಮುಖಿನಾಗುವುದು ಬಹಳ ಅಗತ್ಯ ಎಂದು ಒತ್ತಿ ಹೇಳುತ್ತಿದ್ದರು. ಈ ಏಕಾಂತತೆಯಲ್ಲಿ ಸೃಜನಾತ್ಮಕ ಸಾಮರ್ಥ್ಯ ಹೇಗೆ ಸಂವರ್ಧನೆಗೊಳ್ಳುತ್ತದೆ ಎಂಬುದರ ನಿದರ್ಶನವನ್ನು ನಾವು ಅನೇಕರಲ್ಲಿ ಕಾಣಬಹುದು.

ಶ್ರೀ ಅರವಿಂದರು ತಮ್ಮ ಸೆರೆಮನೆಯ ವಾಸವನ್ನು ಕುರಿತು ಹೀಗೆ ಬರೆಯುತ್ತಾರೆ."ಆ ಏಕಾಂತವಾಸದಲ್ಲಿ ನನ್ನ ಮನಸ್ಸಿನಲ್ಲಿ ಏನೇನು ನಡೆಯಿತು ಅದನ್ನೆಲ್ಲ ನಾನು ಈಗ ವಿವರಿಸಹೋಗುವುದಿಲ್ಲ. ... ನಿನಗೆ ಸತ್ಯದರ್ಶನವಾಗಲೆಂದು ಏಕಾಂತವಾಸ ವಿಧಿಸಿದ್ದೂ ನಾನೇ ಎಂಬ ಭಗವಂತನ ಧ್ವನಿಯನ್ನು ಆಲಿಸಿ ನನ್ನಲ್ಲಿ ಸಂಪೂರ್ಣ ಪರಿವರ್ತನೆಯಾಯಿತು."

ಮೈಕೇಲೇಂಜೆಲೋ (*Michaelaengelo*), ನಡುರಾತ್ರಿಯಲ್ಲಿಯೂ ಕಂದೀಲಿನ ಮಂದ ಬೆಳಕಿನಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿ ಅವನ ಆಪ್ತ ಮಿತ್ರನಾದ ವಾಸೇರಿ (*Vaseri*) ಎಂಬಾತ ಅವನ ಮೇಲೆ ರೇಗಿದ. ಆಗ ಮೈಕೇಲೆಂಜೆಲೋ "ನಾನು ವೃದ್ಧಾಪ್ಯದತ್ತ ವೇಗವಾಗಿ ಸಾಗುತ್ತಿದ್ದೇನೆ. ಸಾವು ನನ್ನ ಸೆರಗಿನ ಅಂಚನ್ನು ಹಿಡಿದು ಬಾ ಎಂದು ಜಗ್ಗುತ್ತಿದೆ. ಒಂದು ದಿನ ಈ ದೇಹ ಈ ಕಂದೀಲಿನ ಹಾಗೆಯೇ ಮಣ್ಣಿಗೆ ಸೇರುತ್ತದೆ" ಎಂದು ಹೇಳಿ ಅವನನ್ನು ಸಮಾಧಾನಪಡಿಸಲೆತ್ನಿಸಿದ.

ಒಮ್ಮೆ ಫ್ರಾನ್ಸ್ ದೇಶದ ಅರಸನಿಗೆ ಮೈಕೇಲೆಂಜೆಲೋ ಹೀಗೆ ಬರೆದಿದ್ದ : " (ಪರಲೋಕದ) ಇನ್ನೊಂದು ಜೀವನದಲ್ಲಿ ಚಿತ್ರ ಬರೆಯಲು, ಶಿಲ್ಪ ಕೆತ್ತಲು ಅವಕಾಶವಿದ್ದರೆ, ಖಂಡಿತವಾಗಿಯೂ ನಾನು ಅದನ್ನು ಕಳೆದುಕೊಳ್ಳುವುದಿಲ್ಲ. ಏಕೆಂದರೆ ಜರಾಮರಣದ ಭಯ ಅಲ್ಲಿರುವುದಿಲ್ಲವಲ್ಲಾ?"

ಥಾಮಸ್ ಕಾರ್ಲೈಲ್(*Thomas Carlyle*)ನ ಬಹಳ ಮಹತ್ವದ ಕೃತಿಯೆಂದರೆ **ಫ್ರೆಂಚ್ ರೆವಲ್ಯೂಷನ್** (***French Revolution***). ಆ ಕೃತಿ ಫ್ರಾನ್ಸ್‌ನಲ್ಲಿ ಮಧ್ಯಯುಗದಲ್ಲಿನ ನಿರಂಕುಶ ಪ್ರಭುತ್ವ ಸೃಷ್ಟಿಸಿದ ಭೀಕರ ವಾತಾವರಣ, ಹಿಂಸಾತ್ಮಕತೆ, ರಾಜಕೀಯ ವಿಪ್ಲವಗಳು ಇವುಗಳೆಲ್ಲದರ ಬಗ್ಗೆ ಕಣ್ಣಿಗೆ ಕಟ್ಟುವಂಥ ವಿವರಗಳನ್ನು ಕೊಡುತ್ತದೆ. ಥಾಮಸ್ ಕಾರ್ಲೈಲ್‌ನ ಈ ಬೃಹತ್ ಕೃತಿ ವಿಶ್ವಸಾಹಿತ್ಯದಲ್ಲೇ ಒಂದು ಕ್ಲಾಸಿಕ್. ಆದರೆ ಈ ಬೃಹತ್ ಕೃತಿಯ ಸೃಷ್ಟಿಯ ಹಿಂದೆ ಅದೆಂಥ ವಿಸ್ಮಯ ಅಡಗಿದೆ !

ಕಾರ್ಲೈಲ್ ಅನೇಕ ವರ್ಷಗಳ ಸತತ ಪರಿಶ್ರಮದಿಂದ ಆ ಕೃತಿಯ ಹಸ್ತಪ್ರತಿಯನ್ನು ಸಿದ್ಧಪಡಿಸಿ ತನ್ನ ಸ್ನೇಹಿತ ಹಾಗೂ ಪ್ರಸಿದ್ಧ ಲೇಖಕನಾಗಿದ್ದ ಜಾನ್ ಸ್ಟೂವರ್ಟ್ ಮಿಲ್ (*John Stuart Mill*)ಗೆ ವಿಮರ್ಶಾತ್ಮಕ ಪ್ರತಿ ಕ್ರಿಯೆಗಾಗಿ ಓದಲು ಕೊಟ್ಟಿದ್ದನು. ಮಿಲ್ ಅದನ್ನು ತನ್ನ ಮನೆಗೆ ಕೊಂಡೊಯ್ದು ಅರ್ಧ ಓದಿ ಮ್ಯಾಂಟಲ್ ಪೀಸ್ ಮೇಲೆ ಇಟ್ಟಿದ್ದನು. ಛಳಿಪ್ರದೇಶಗಳಲ್ಲಿ ಕೋಣೆಯನ್ನು ಬೆಚ್ಚಗಿರಿಸಲು ಉಪಯೋಗಿಸುವ ಗೂಡೊಲೆಯ ಮೇಲ್ಭಾಗವನ್ನು ಮ್ಯಾಂಟಲ್ ಪೀಸ್ ಎನ್ನುತ್ತಾರೆ. ಮಿಲ್‌ನ ಮನೆಯಲ್ಲಿ ಕೆಲಸ ಮಾಡುತ್ತಿದ್ದವಳು ಅಂದು ಕೋಣೆಯನ್ನು ಬೆಚ್ಚಗಿರಿಸುವುದಕ್ಕಾಗಿ ಬಂದಾಗ ಬೆಂಕಿ ಯನ್ನು ಹೊತ್ತಿಸಲು ಆ ಹಸ್ತಪ್ರತಿಯನ್ನು ಉಪಯೋಗಿಸಿಬಿಟ್ಟಳು. ವರ್ಷಾನುಗಟ್ಟಲೆಯ ದೀರ್ಘ ಯಾತನಾಮಯವಾದ ಪರಿಶ್ರಮ ಕೆಲವೇ ಸೆಕೆಂಡುಗಳಲ್ಲಿ ಬೆಂಕಿಗಾಹುತಿಯಾಗಿ ಹೋಯಿತು.

ಈ ವಿಷಯವನ್ನು ಕಾರ್ಲೈಲ್‌ಗೆ ಹೇಗೆ ತಿಳಿಸುವುದು? ಎಂದು ಮಿಲ್ ಬಹಳ ಚಡಪಡಿಸಿ ಕೊನೆಗೆ ಹೇಗೂ ತಿಳಿಸಲೇಬೇಕಲ್ಲ ಎಂದುಕೊಂಡು ಒಂದು ದಿನ ಬೆಳಿಗ್ಗೆ ಕಾರ್ಲೈಲ್‌ನ ಅಧ್ಯಯನದ ಕೋಣೆಗೆ ಬರುತ್ತಾನೆ. ಮಿಲ್ ತನ್ನ ಸ್ನೇಹಿತನನ್ನು ಕುರಿತು 'ನಿನಗೆ ವಿಷಯವನ್ನು ಹೇಗೆ ತಿಳಿಸಬೇಕೋ ನನಗೆ ತೋಚುತ್ತಿಲ್ಲ. ನೀನು ಕೊಟ್ಟಿದ್ದ ಹಸ್ತಪ್ರತಿಯನ್ನು ನಮ್ಮ ಮನೆಯ ಕೆಲಸದವಳು ತಿಳಿಯದೆ ಬೆಂಕಿ ಹಚ್ಚಲು ಉಪಯೋಗಿಸಿ ಬಿಟ್ಟಿದ್ದಾಳೆ' ಎನ್ನುತ್ತಾನೆ. ಸಮಾಚಾರವನ್ನು ಹೊರಗೆಡಹಿದ್ದರಿಂದ ಬಿಗಡಾಯಿಸಬಹುದಾದ ಪರಿಸ್ಥಿತಿಯನ್ನು ಊಹಿಸಿ ಜಾನ್ ಮಿಲ್ ಅಲ್ಲಿಂದ ಮೆಲ್ಲಗೆ ಕಾಲ್ತೆಗೆಯುತ್ತಾನೆ. ಕಾರ್ಲೈಲ್ ಕೋಪ, ದುಃಖ, ಅಸಹಾಯಕತೆ ಇವುಗಳ ಮಧ್ಯೆ ಹೊಯ್ದಾಡುತ್ತಾ ಕೊನೆಗೆ ಅತ್ಯಂತ ಭಾರವಾದ ಹೃದಯದಿಂದ ಆಳವಾದ ಹತಾಶೆಯಲ್ಲಿ ಕುಸಿದುಹೋಗುತ್ತಾನೆ.

ಹೀಗೆ ನಿರಾಶಾಭಾವದಲ್ಲೇ ದಿನಗಳನ್ನು ದೂಡುತ್ತಿರುವಾಗ ಕಾರ್ಲೈಲ್ ಒಂದು ದಿನ ತನ್ನ ಕೋಣೆಯ ಕಿಟಕಿಯ ಬಳಿ ನಿಂತು ಹೊರಗೆ ನೋಡುತ್ತಿರುತ್ತಾನೆ. ಮನೆಯ ಹತ್ತಿರದಲ್ಲೇ ಕೆಲವರು ಕೆಲಸಗಾರರು ಇಟ್ಟಿಗೆಗಳನ್ನು ಜೋಡಿಸುತ್ತಿರುವುದು ಕಾಣುತ್ತದೆ. ಒಂದೊಂದೇ ಇಟ್ಟಿಗೆಯನ್ನು ತೆಗೆದುಕೊಂಡು ಅವರು ಜೋಡಿಸುತ್ತಿದ್ದ ರೀತಿ ತಾನೂ ಯಾಕೆ ಪದಗಳ ಪಕ್ಕದಲ್ಲಿ ಪದಗಳನ್ನೂ, ವಾಕ್ಯದ ಪಕ್ಕದಲ್ಲಿ ವಾಕ್ಯವನ್ನೂ ಜೋಡಿಸಬಾರದು ಎಂದು ಕಾರ್ಲೈಲ್‌ಗೆ ಅನ್ನಿಸುತ್ತದೆ. ಈ ರೀತಿ ಯೋಚಿಸುತ್ತಾ 'ಫ್ರೆಂಚ್ ರೆವಲ್ಯೂಷನ್' ಕೃತಿಯನ್ನು ಮತ್ತೆ ಬರೆಯಲು ತೊಡಗುತ್ತಾನೆ. ಈವತ್ತಿಗೂ ಆ ಕೃತಿ ವಿಶ್ವ ಸಾಹಿತ್ಯದಲ್ಲೇ ಒಂದು ಕ್ಲಾಸಿಕ್ ಎನ್ನಿಸಿದೆ ಬರೀ ವಿಷಯಸಂಪತ್ತಿನಿಂದ ಮಾತ್ರವಲ್ಲ—ಹತಾಶೆ, ನಿರಾಸೆಗಳನ್ನು ಮೆಟ್ಟಿನಿಲ್ಲುವ ಧೈರ್ಯ, ಸಾಹಸಗಳಿಗೆ ಸ್ಮಾರಕವಾಗಿ!"

ಅಮೆರಿಕದ ಒಂದು ಶಾಲೆಯಲ್ಲಿ ಮಕ್ಕಳ ಸೃಜನಶೀಲತೆಯನ್ನು ಪರೀಕ್ಷಿಸುವುದಕ್ಕಾಗಿ ಹಿಮ ಬೀಳುವ ದಿನ ಶಾಲೆಯ ಆಟದ ಬಯಲು ಹೇಗಿರುತ್ತದೆ ಎಂಬುದನ್ನು ಚಿತ್ರಿಸಿ ಎಂಬ ಪ್ರಶ್ನೆಯನ್ನು ಕೊಡಲಾಯಿತು. ಎಲ್ಲರೂ ಭಾರಿ ಭಾರಿ ಚಿತ್ರ ಮಾಡಿದರು. ಒಂದು ಪುಟಾಣಿ ಮಗು ಮಾತ್ರ ಖಾಲಿ ಕಾಗದದಲ್ಲಿ ತನ್ನ ಹೆಸರು ಬರೆದು ಟೀಚರ್‌ಗೆ ಕೊಟ್ಟಿತು. ಟೀಚರ್ ಕೇಳಿದರು : "ಇದೇನು?" ಮಗು ಹೇಳಿತು :—"ಹಿಮ ಬೀಳುವ ದಿನ ಬಯಲು ಬಿಳೇ ಬಣ್ಣದಲ್ಲಿ ತಾನೆ ಇರುವುದು. ಅಷ್ಟನ್ನು ನಾನು ಚಿತ್ರಿಸಿದ್ದೇನೆ." ಟೀಚರ್ ಮಗುವಿನ ಬೆನ್ನು ತಟ್ಟಿದರು.